ದಿನಾಂಕ :06-01-2024 ಓ ಎಸ್ ನಂ. 154/2021

ಡಿ. ಡಬ್ಲ್ಯೂ - 1

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಶ್ರೀ ಎಸ ಎಮ ಟಿ ವಾದಿ ಪರ ವಕೀಲರಿಂದ:

ನಾನು 10 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಸಾಕ್ಷಿ ಪ್ರಮಾಣಪತ್ರಿಕೆಯಲ್ಲಿ ಬರೆಯಿಸಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ವಾಯರು ಈ ದಾವೆಯನ್ನು ಹೊಲದ ಸಂಬಂದ ಮಾಡಿರುತ್ತಾರೆ. ಸಾಕ್ಷ್ಯ ಪ್ರಮಾಣಪತ್ರಿಕೆಯಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ವಕೀಲರು ಹೇಳಿದ ರೀತಿಯಲ್ಲಿ ನಾನು ಸಾಕ್ಷಿನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ವಾದಿಗೆ ನಾನು, 2 ನೇ ವಾದಿ ಮತ್ತು ಕಸ್ತೂರೆವ್ವ ಬಡಿಗೇರ ಇವರು ಮಕ್ಕಳು ಇರುತ್ತೇವೆ. ನಾನು ವ್ಯವಸಾಯ ಮಾಡುತ್ತೇನೆ. 2 ನೇ ವಾದಿಯು ಸುಮಾರು 22 ವರ್ಷಗಳ ಕಾಲ ಭಾರತೀಯ ಸೇನೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದರೆ ಸರಿ. ವಾದಿಯರು ಮತ್ತು ನಾನು ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಜೊತೆಯಲ್ಲಿ ವಾಸಿಸುತ್ತಿದ್ದೆವು ಆದರೆ ದಾವಾ ದಾಖಲಿಸಿದ ನಂತರ ವಾದಿಯರು ನನ್ನನ್ನು ಬಿಟ್ಟು ಬೇರೆ ಇರುತ್ತಾರೆ ಎಂದು ನುಡಿಯುತ್ತಾರೆ. ನಾನು ವಾದಿಯರಿಂದ ಸುಮಾರು 20 ವರ್ಷಗಳಿಂದ ಬೇರೆ ಇರುತ್ತೇನೆ ಎಂದರೆ ಸರಿಯಲ್ಲ. 2 ನೇ ವಾದಿಯು 1 ನೇ ವಾದಿಯ ಯೋಗಕ್ಷೇಮವನ್ನು ನೋಡುತ್ತಿದ್ದಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಈಗಲೂ ಸಹಾ ನಾನೇ ಅವರಿಗೆ ಹಣವನ್ನು ನೀಡುತ್ತೇನೆ ಎಂದು ನುಡಿಯುತ್ತಾರೆ. 2 ನೇ ವಾದಿಯ ಸಹಾಯವನ್ನು 1 ನೇ ವಾದಿಯು ಪಡೆದುಕೊಂಡು ದಾವಾ ಆಸ್ತಿಗಳನ್ನು ಖರೀದಿಗೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸಂಬಂದ ನನ್ನ ಹಾಗೂ ವಾದಿಯರ ನಡುವೆ ಯಾವುದೇ ಜಗಳ ಆಗಿರುವುದಿಲ್ಲ ಆದರೆ ನನ್ನ ಹಿಸ್ಸೆಯನ್ನು ಕೇಳಿರುತ್ತೇನೆ. ಜೂನ್ 2021 ರಂದು ನಾನು 1 ನೇ ವಾದಿಗೆ ಹಲ್ಲೆಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆದರೆ ಪೊಲೀಸರು ನನ್ನನ್ನು ಹಾಗೂ ವಾದಿಯರನ್ನು ಕರೆಯಿಸಿರುತ್ತಾರೆ ಮತ್ತು ಯಾವುದೇ ಕಂಪ್ಲೆಂಟ್ ಆಗಿರುವುದಿಲ್ಲ. ದಾವಾ ಆಸ್ತಿಗಳನ್ನು ನಾವೆಲ್ಲರೂ ಸೇರಿ ಖರೀದಿಗೆ ಪಡೆದಿರುತ್ತೇವೆ. ದಾವಾ ಆಸ್ತಿಗಳನ್ನು 1 ನೇ ವಾದಿಯು ಖರೀದಿಸಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು 1 ನೇ ವಾದಿಯು ನಮ್ಮ ತಂದೆಯಾದ ಕಾರಣ ಅವರ ಹೆಸರಿನಲ್ಲಿ ಮಾಡಿಸಿರುತ್ತೇವೆ



ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಸಂಬಂದ ಖರೀದಿ ಪತ್ರ ಯಾವಾಗ ಆಯಿತು ಎಂದು ನನಗೆ ತಿಳುವಳಿಕೆ ಇರುತ್ತದೆ. ಖರೀದಿ ಪತ್ರದ ಸಂಬಂದ ಖರೀದಿ ಹಿಡಿದ ದಿನಾಂಕದಿಂದ ಭಕ್ಷೀಸು ಪತ್ರ ಆಗುವ ತನಕ

ಸದರಿ ಖರೀದಿ ಪತ್ರದ ಸಂಬಂದ ಯಾವುದೇ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿರುವುದಿಲ್ಲ. ನಿಪಿ-5 ನ್ನು ಪ್ರಶ್ನಿಸಿ ತಹಶೀಲ್ದಾರ ನ್ಯಾಯಾಲಯಲ್ಲಿ ಒಂದು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ಸದರಿ ಆರ ಆರ ಟಿ ನಂ.69/2020 ಇದರಲ್ಲಿ ನಾನು ಸಲ್ಲಿಸಿದ ತಕರಾರು ಅರ್ಜಿಯನ್ನು ವಜಾ ಮಾಡಿ ವಾದಿಯರಂತೆ ಆದೇಶವಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಆದೇಶದ ವಿರುದ್ದ ನಾನು ಮೇಲ್ಮನವಿ ಸಲ್ಲಿಸಿರುತೇನೆ ಎಂದು ನುಡಿಯುತ್ತಾರೆ. ಆದರೆ ಮೇಲ್ಮನವಿಯ ನಂಬರ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಇತ್ತೀಚಿನ ಉತಾರಗಳನ್ನು ನಾನು ನೋಡಿರುವುದಿಲ್ಲ. ಸದರಿ ದಾವಾ ಆಸ್ತಿಯ ಉತಾರದಲ್ಲಿ 2 ನೇ ವಾದಿಯ ಹೆಸರು ಇರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನು ಅದಕ್ಕೆ ತಕರಾರು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. 2 ನೇ ವಾದಿಯ ಹೆಸರು ದಾಖಲಾಗುವುದಕ್ಕಿಂತ ಪೂರ್ವದಲ್ಲಿ ದಾವಾ ಆಸ್ತಿಯ ಉತಾರಗಳಲ್ಲಿ 1 ನೇ ವಾದಿಯ ಹೆಸರು ದಾಖಲು ಇತ್ತು ಎಂದರೆ ಸರಿ. ನಾನು ಮತ್ತು ವಾದಿಯರು ದಾವಾ ಆಸ್ತಿಗಳಲ್ಲಿ ಕಬ್ಜಾ ವಹಿವಾಟನಲ್ಲಿ ಇರುತ್ತೇನೆ ಎಂದು ಸಾಕ್ಷ ಪ್ರಮಾಣಪತ್ರಿಕೆಯಲ್ಲಿ ಬರೆಯಿಸಿರುವುದು ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಗಳಲ್ಲಿ ಕಬ್ಜೆಯಲ್ಲಿ ಇರುತ್ತೇನೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಮಾಡಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳನ್ನು ಪಿತ್ರಾರ್ಜಿತ ಆಸ್ತಿಯಲ್ಲಿ ಬಂದ ಉತ್ಪನ್ನದಿಂದ ಖರೀದಿ ಮಾಡಿರುತ್ತೇವೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲಾತಿ ಇರುವುದಿಲ್ಲ ಸಾಕ್ಷಿಯು ಮುಂದುವರೆದು ಎಲ್ಲರೂ ಒಟ್ಟಿಗೆ ಇರುವಾಗ ದಾಖಲಾತಿ ಎಲ್ಲಿಂದ ಬರುತ್ತದೆ ಎಂದು ನುಡಿಯುತ್ತಾರೆ. ಪಿತ್ರಾರ್ಜಿತ ಆಸ್ತಿಯಲ್ಲಿ ಬಂದ ಉತ್ಪನ್ನದಿಂದ ದಾವಾ ಆಸ್ತಿಗಳನ್ನು 1 ನೇವಾದಿಯು ಖರೀದಿ ಮಾಡಿರುತ್ತಾರೆ ಎಂದು ಸಾಕ್ಷ್ಯ ಪ್ರಮಾಣ ಪತ್ರಿಕೆಯಲ್ಲಿ ಬರೆಯಿಸಿರುವುದು ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ 1 ನೇ ವಾದಿಯು ಸಂಪೂರ್ಣ ಮಾಲೀಕರು ಇದ್ದ ಕಾರಣ ಅವರು ನಿಪಿ-5 ರಂತೆ ಭಕ್ಷೀಸು ಪತ್ರವನ್ನು ಮಾಡಲು ಸಂಪೂರ್ಣ ಹಕ್ಕು ಉಳ್ಳವರು ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು 1 ನೇ ವಾದಿಯ ಸ್ವಯಾರ್ಜಿತ ಆಸ್ತಿಗಳು ಇರುವುದರಿಂದ ಅದರ ಮೇಲೆ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಅಧಿಕ ಬೆಲೆ ಬಾಳುವುದರಿಂದ ಅವುಗಳನ್ನು ಲಪಟಾಯಿಸಲು ನಾನು ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

- 5 -

ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ